ಶ್ರೀ ಪಿ. ಆಂಜನಪ್ಪ.—ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಿಕೊಡುತ್ತೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ನಮಗೂ ಅದೇ ಆಸೆ ಇದೆ.

Water Supply to Pavagada Town.

*Q.—335. Sri P. ANJANAPPA (Sira).—

Will the Government be pleased to state :—

(*a*) whether it has come to their notice that there is difficulty of water supply in Pavagada Town ;

(*b*) whether they have received any representations in this behalf ;

(*c*) the decision they have taken in the matter ?

A.— Sri T. SUBRAMANYA (Minister for Law, Labour and Local Self-Government).—

(*a*) Yes.

(*b*) Yes.

(*c*) The matter is under consideration.

ಶ್ರೀ ಪಿ. ಆಂಜನಪ್ಪ.—ಬಾರ್ಡರ್ ತಾಲ್ಲೂಕ್ ಇದು. ಇಡೀ ತಾಲ್ಲೂಕಿನಲ್ಲೇ ಕುಡಿಯುವ ನೀರಿಲ್ಲ. ಆದರೆ ತಾಲ್ಲೂಕ್ ನಥೆಯಲ್ಲಾದರೂ ಕುಡಿಯುವ ನೀರಿಗೊಂದು ಅನುಕೂಲ ಕಲ್ಪಿಸಿಕೊಡುವಿರಾ?

†ಶ್ರೀ ಟಿ. ಸುಬ್ರಹ್ಮಣ್ಯ.—ಈ ಬಗ್ಗೆ ಮುಂದಿನ ವರ್ಷ ಪ್ರಯತ್ನ ಮಾಡಬೇಕೆಂದಿದ್ದೇವೆ. ಈ ದಿವಸ ಆ ಪಾವಗಡ ಮುನಿಸಿಪಾಲಿಟಿಗೆ ಈ ವ್ಯವಸ್ಥೆಗಾಗಿ ಸರ ಕಾರದವರು ಹಣವನ್ನು ಸಾಲದ ರೂಪದಲ್ಲೇ ಕೊಡ ಬೇಕಾಗಿದೆ. ಆದರೆ ಆ ಸಾಲವನ್ನು ಮತ್ತೆ ತೀರಿಸಲು ಆ ಮುನಿಸಿಪಾಲಿಟಿಗೆ ಅಂಥ ರಹದಾರಿಗಳಿಲ್ಲ. ಆದ ಕ್ಕಾಗಿ ನಾನು ಈಗಾಗಲೇ ಆ ಮುನಿಸಿಪಾಲಿಟಿಯ ವರಿಗೆ ಸರ್ಕಾರದಿಂದ ಸಾಲಪಡೆಯುತಕ್ಕ ಅರ್ಹತೆ ಪಡೆಯಲು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳ ಬೇಕೆಂದು ತಿಳಿಸಿದ್ದೇನೆ.

ಶ್ರೀ ಪಿ. ಆಂಜನಪ್ಪ.—ನಮಗೆ ಆ ಸಾಲ ತೀರಿಸುವ ಚೈತನ್ಯವಿಲ್ಲದಿದ್ದರೆ ನಾವು ತಮಗೆ ಆ ನಮ್ಮ ಪರಿಸ್ಥಿ ತಿಯನ್ನೇ ಆಧಾರ ಮಾಡಿಕೊಡುತ್ತೇವೆ. ಏಕಾಗ ಬಾರದು? (ನಗು!)

(ಉತ್ತರವಿಲ್ಲ)

ಶ್ರೀ ಟಿ. ತಾರೇಗೌಡ.—ಈ ದಿವಸ ಪಾವಗಡ ಟೌನಿನಲ್ಲಿ ಕುಡಿಯುವ ನೀರು ಸಿಕ್ಕದೆ ಅವರು ಉಪ್ಪು ನೀರನ್ನೇ ಕುಡಿಯುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಸುಬ್ರಹ್ಮಣ್ಯ.—ನನ್ನ ಗಮನಕ್ಕೂ ಬಂದಿದೆ. ಆದರೆ ಇದರ ಬಗ್ಗೆ ಒಂದು ಶಬ್ದವನ್ನು ಇಂಗ್ಲೀಷಿನಲ್ಲಿ ಹೇಳುವುದಾದರೆ ಆ ನೀರನ್ನು "ಬ್ರಾಕಿಷ್ ವಾಟರ್" ಎಂದು ಹೇಳಬಹುದು. ನೀರು ಸ್ವಲ್ಪ ಉಪ್ಪಾಗಿದೆ. ನಾನೂ ಸಹ ಕುಡಿದಿದ್ದೇನೆ.

ಶ್ರೀ ಟಿ. ತಾರೇಗೌಡ.—ಆ ಮುನಿಸಿಪಾಲಿಟಿಯವರು ಸ್ವಲ್ಪಮಟ್ಟಿಗೆ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳು ವಂತೆ ತಿಳಿಸಿದ್ದೇನೆಂದು ಮಾನ್ಯ ಮಂತ್ರಿಗಳು ಈಗ ತಾನೆ ತಿಳಿಸಿದರು. ಹಾಗೆ ಅವರಿಗೆ ವರಮಾನ ಕಡಮೆಯಿರುವುದರಿಂದ ಸರ್ಕಾರದವರು ಅವರಿಗೆ ಬೇಕಾ ಗುವ ಹಣದಲ್ಲಿ ಅರ್ಧವನ್ನು ಗ್ರಾಂಟ್ ರೂಪದಲ್ಲೂ ಇನ್ನರ್ಧವನ್ನು ಸಾಲದ ರೂಪದಲ್ಲೂ ಏಕೆ ಒದಗಿಸ ಬಾರದು?

ಶ್ರೀ ಟಿ. ಸುಬ್ರಹ್ಮಣ್ಯ.—ಹಾಗೆ ಗ್ರಾಂಟನ್ನು ಕೊಡುವುದಕ್ಕಾಗುವುದಿಲ್ಲ. ಏನಿದ್ದರೂ ಅವರೀ ದಿವಸ ಸಾಲದ ರೂಪದಲ್ಲಿ ಹಣ ಪಡೆಯತಕ್ಕ ಅವಕಾಶ ಮಾಡಿ ಕೊಳ್ಳಬೇಕು. ಆದ್ದರಿಂದ ಅವರು ಈ ಮಧ್ಯೆ ತಮ್ಮ ವರಮಾನವನ್ನು ಸ್ವಲ್ಪ ಜಾಸ್ತಿ ಮಾಡಿಕೊಳ್ಳಬೇಕೆಂದು ನಾನಾಗಲೇ ಅವರಿಗೆ ತಿಳಿಸಿದ್ದೇನೆ.

Road from Chinakuruli to Akkihebbal in Mandya District.

*Q.—358. Sri M. K. BOMME GOWDA (Krishnarajpet).—

Will the Government be pleased to state :—

(*a*) the number of years since the construction work of the road from Chinakuruli to Akkihebbal *via* Bookanakere in Mandya District was started;

(*b*) the reasons for not completing it so far?

A.—Sri H. M. CHANNABASAPPA (Minister for Public Works and Electricity).—

(*a*) About ten years.

(*b*) The sanctioned estimate was only for a portion of the road from Bookanakere to Akkihebbal and has been executed. Inadequacy of provision for the full length of the road was the main reason for not completing the work.

ಶ್ರೀ ಎಂ. ಕೆ. ಬೊಮ್ಮೇಗೌಡ.—(ಎ) ಪ್ರಶ್ನೆಗೆ ಉತ್ತರವಾಗಿ ಸುಮಾರು ಹತ್ತು ವರ್ಷಗಳೆಂದು ಹೇಳಿ ದ್ದೀರಿ. ಇಷ್ಟು ತಡವಾಗುವುದಕ್ಕೆ ಕಾರಣವೇನು?

†Sri M. N. NAGHNOOR.—Sir, there were three estimates—one was for 9 miles and another was for 3½ miles. Sanction has been accorded piecemeal.

Sri K. S. SURYANARAYANA RAO.—Sir, if the work is taken up piecemeal, will it not cost more money at the several stages? Would it not be more economical to execute it at one time?